

# ಪರೀಕ್ಷೆ ತಯಾರಿ

ಬನ್ನಿರಿ ಬನ್ನಿರಿ ಗೆಳೆಯರೆ ಓದೋಣ
ಪರೀಕ್ಷೆಗಾಗಿ ನಾವು ಕಲಿಯೋಣ
ಓದುವ ರೀತಿಯ ಜತೆಯಲಿ
ತಿಳಿಯೋಣ
ಕಲಿಯುವ ಕ್ರಮಗಳ ನಾವು
ಅರಿಯೋಣ

ಸಮಯದ ಪಟ್ಟಿ ಮಾಡಲೇಬೇಕು
ಅದನನುಸರಿಸಿ ನಡೆಯಲೇಬೇಕು
ಹೊತ್ತಿಗೆ ಹೊತ್ತಿಗೆ ಗೊತ್ತಿರಬೇಕು
ವಿಷಯದ ಹಂಚಿಕೆ ತಿಳಿದಿರಬೇಕು

ಬೆಳ್ಳಂಬೆಳಗೆ ಕಷ್ಟದ ಪಾಠ ಓದಿರಲಿ
ನಿದ್ದೆಯ ಹೊತ್ತದು ನಡುದಿನದಲ್ಲಿ
ಬರೆಯುತ ಕಲಿಯುವ ನಾವಲ್ಲಿ
ಸಂಜೆಗೆ ವಿಷಯದ ತೊಂದರೆಯಿಲ್ಲ

ರಾತ್ರಿಲಿ ಮತ್ತೆ ಜಡತನ ಬರುವುದು
ಗಂಟೆಗೆ ಒಮ್ಮೆ ಧ್ಯಾನವ ಮಾಡುವುದು
ಓದಿದ ಪಾಠವ ಮರು ಓದುವುದು
ಮೆಲುಕನು ಹಾಕುತ ಕಲಿಯುವುದು

ಪರೀಕ್ಷೆ ನಡೆಯುವ ದಿನಗಳೆ ಇರಲಿ
ಬೇಡವೆ ಬೇಡ ದಿನಚರಿ ತಪ್ಪುವುದಲ್ಲಿ
ಪರೀಕ್ಷೆಗೆಂದೇ ಇರುಳಿನ ನಿದ್ದೆ ಕೆಡಲಲ್ಲಿ
ಖಚಿತವೆ ಇಹುದು ಸೋಲು ನಮಗಲ್ಲಿ

ನೆನಪಿಡಿ ಗೆಳೆಯರೆ,ನಾವು ನೀವುಗಳೆಲ್ಲ
ನೇಮವ ಪಾಲಿಸಿ ಊಟದ ರೀತಿಯಲು
ನಿಯಮಿತ ತಿನಿಸು ನಿಯಮಿತ ಶಿಸ್ತಿರೆ
ದಿಟವದು ನಾವು ಪರೀಕ್ಷೆ ಗೆಲ್ಲುವೆವು

■ **ವಿ.ಸುಬ್ರಹ್ಮಣ್ಯ ಭಟ್, ಬಂಟ್ವಾಳ**

---

# ಬೇಸಿಗೆ ರಜೆ

ಬೇಸಿಗೆ ರಜೆ ಬಂತಪ್ಪ
ಅಜ್ಜಿ ಮನೆಗೆ ಕಳಿಸಪ್ಪ
ಹೊಳೆ ನೀರಲಿ ಈಜಾಟ
ಮಾವಿನ ಮರದಲಿ ಮರಕೋತಿಯಾಟ
ಆಡಲೇ ಬೇಕಪ್ಪ
ಅಜ್ಜನ ತೋಟದ ಬಿಕ್ಕೆ ಹಣ್ಣು
ಪಕ್ಕದ ತೋಟದ ಮಾವಿನಹಣ್ಣು
ತಿನ್ನಲೇ ಬೇಕಪ್ಪ
ಅಜ್ಜಿ ಮಾಡಿದ ತಂಬಿಟ್ಟು
ಚಕ್ಕುಲಿ, ಕೋಡಬಳೆ, ನಿಪ್ಪಟ್ಟು
ಸವಿಯಲೇ ಬೇಕಪ್ಪ

ಕೊಟ್ಟಿಗೆ ಕರುವಿಗೆ ಹೆಸರನು ಇಟ್ಟು
ಬೀದಿಯ ನಾಯಿಗೆ ರೊಟ್ಟಿಯ ಕೊಟ್ಟು
ಖುಷಿಪಡಬೇಕಪ್ಪ
ಚುಕ್ಕಿ ಚಂದ್ರಮರ ಅಂಗೈಲಿಡಿದು
ಆಕಾಶವನೇ ಚಾದರವಾಗಿಸಿ
ಕನಸಿನೂರಲಿ ನಲಿಬೇಕಪ್ಪ
ಬೇಸಿಗೆ ರಜೆ ಬಂತಪ್ಪ
ಪ್ಲೀಸ್... ಅಜ್ಜಿ ಮನೆಗೆ ಕಳಿಸಪ್ಪ

■ **ಜಮುನಾ ರಾಣಿ ಹೆಚ್.ಎಸ್.**



ಚಿತ್ರ: ವಿಜಯಕುಮಾರಿ ಆರ್.